# ಪ್ಲೀಸ್ ಪ್ಲೀಸ್ ಪ್ಲೀಸ್

ಅವನು ಹೀಗಿರಲಿಲ್ಲ
ನಂಬಿದ್ರೆ ನಂಬಿ
ಬಿಟ್ರೆ ಬಿಡಿ

ಅರ್ಧ ರಾತ್ರಿಯಲ್ಲಿ
ಕತ್ತಲ ಸೀಳುವಂತಾ
ಪಿಸುಮಾತೊಂದನ್ನು
ಹಡೆದು ನಾಜೂಕಾಗಿ
ಉಸುರುತ್ತಿದ್ದ.

ಅರೆ ಹೇಳ್ತೀನಲ್ಲ...
ಅವ ಹೀಗಿರಲೇ ಇಲ್ಲ
ಅವನ ಕದಪುಗಳಿಗೂ
ಗುಲಾಬಿಯಂಥದ್ದೊಂದು ರಂಗಿದೆ
ಎನ್ನುವುದು ತಿಳಿದದ್ದು ಸಹ
ಇದೇ ಸರಹೊತ್ತಿನಲ್ಲಿಯೇ
ಮತ್ತೆ ಜಗದ ಎಲ್ಲ ಗಡ್ಡಧಾರಿಗಳೂ
ಪ್ರೇಮದಲ್ಲಿ ಮುಳುಗಿದಾಗ
ಕ್ಷಣಕ್ಷಣಕ್ಕೂ ರಂಗೇರುತ್ತಾರೆನ್ನುವ
ವಿಚಾರವೂ ಇವನಿಂದಲೇ
ನನಗೆ ತಿಳಿದದ್ದು.


ನಾಗೇಶ ಹೆಗಡೆ

ಒಂದರ್ಥದಲ್ಲಿ ಇವನು
ನನಗೆ ಸಿಕ್ಕ ಮೂಲಪುರುಷನು
ಪುರುಷ ಕುಲದ ಪ್ರತಿನಿಧಿಯೂ

ನಾ ಯಾವ ಚರಿತ್ರೆಯ ಗೆದ್ದಲು ತಿಂದ
ಪುಟವನ್ನೋದುತ್ತಿಲ್ಲ ಇಲ್ಲಿ...
ನೀವೆಲ್ಲ ಹುಬ್ಬುಗಂಟಿಕ್ಕುತ್ತೀರೇಕೆ
ಅಲ್ಲ, ನಾ ಸಣ್ಣಗೆ ನಕ್ಕದ್ದಕ್ಕೆ
ಕೋಪಿಸಿಕೊಳ್ಳಬೇಡಿ
ಅದಕ್ಕೆ ಕಾರಣ ನೀವಂತು ಅಲ್ಲ.

ಅವನ ಕತೆ ಅವನ ಪುರಾಣ
ಅವನ ಚರಿತ್ರೆ...
ಹೇಗಂದರೂ ಅದು ಅದೇ
ಅದರ ಹೊರತಾದ ಅವನಿಗೆ
ಸೂಕ್ತವಾಗುವ ಒಂದೇ ಒಂದು ಪದ
ಈ ಭಾಷೆಯಲ್ಲೇಕೆ ಇಲ್ಲ?

ಅವನ ಪ್ಯಾಲೆಟ್ಟಿನ ಎಲ್ಲ ಬಣ್ಣಗಳೂ
ಸಾಲದಾದವು
ಮತ್ತು ತೋಯಿಸುವ ತೊಳೆಯುವ
ಒಂದೇ ಮಳೆಯಲ್ಲಿ
ನಾವಿಬ್ಬರೂ ನಿಲ್ಲಬೇಕಾಗಿ ಬಂದ
ಪ್ರಸಂಗದಲ್ಲಿ ನಾ ಪಾತ್ರ ಆಯ್ದುಕೊಂಡರೆ
ಅದಾಗಲೇ ಅವನ ಕೈಯಲ್ಲಿತ್ತು ಸೂತ್ರ

ಆದರೆ ಗೊಂಬೆ ಕೇಳಿದ
ಒಂದೇ ಒಂದು ಪ್ರಶ್ನೆಗೆ
ಆಟವನ್ನೇ ಕೆಡಿಸಿಬಿಟ್ಟ ನೋಡಿ

ಆದ್ರೆ ದಯವಿಟ್ಟು ನಂಬಿ ನೀವೆಲ್ಲ
ಅವ ಹೀಗಿರಲಿಲ್ಲ
ಪ್ಲೀಸ್... ಪ್ಲೀಸ್... ಪ್ಲೀಸ್...

**● ಆಶಾ ಜಗದೀಶ್**